‘ಸು ಫ್ರಂ ಸೋ’ ಸಿನಿಮಾದಲ್ಲಿ ಭಾನು ಪಾತ್ರದಲ್ಲಿನ ಮುಗ್ಧತೆಯೊಂದಿಗೆ ಜನಮನ ಗೆದ್ದವರು ನಟಿ ಸಂಧ್ಯಾ ಅರಕೆರೆ. ರಂಗಭೂಮಿ ಒಡನಾಟದೊಂದಿಗೆ ಸಿನಿಮಾ ಹಾದಿ ತುಳಿದ ಅವರು ‘ಸುಳಿ’, ‘ಒಂದಲ್ಲ ಎರಡಲ್ಲ’, ‘ಫೋಟೊ’ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ತಮ್ಮ ಸಿನಿಮಾ ಪಯಣವನ್ನು ‘ಸುಧಾ’ದೊಂದಿಗೆ ಹಂಚಿಕೊಂಡಿದ್ದಾರೆ.

■ ಸುಮಲತಾ ಎನ್‌

# ಸಂಧ್ಯಾ ಕಾಲ!

ಇತ್ತೀಚೆಗೆ ಬಿಡುಗಡೆಯಾಗಿ, ಜನರಿಂದ ಬೆನ್ನು ತಟ್ಟಿಸಿಕೊಂಡ ‘ಸು ಫ್ರಂ ಸೋ’ ಸಿನಿಮಾ ಯಶಸ್ಸಿನ ಬಗ್ಗೆ ಮಾತಾಡುವಾಗ, ಆ ಮಾತಿನೊಂದಿಗೆ ಭಾನು ಪಾತ್ರದ ಬಗ್ಗೆ ಪ್ರಶಂಸೆಯೂ ಸೇರಿಕೊಳ್ಳುತ್ತದೆ. ಸಿನಿಮಾಗೆ ತಿರುವು ನೀಡಿದಂಥ ಆ ಪಾತ್ರದಲ್ಲಿನ ಮುಗ್ಧತೆ ಜನರ ಮನಸ್ಸಿನಲ್ಲಿ ಅಚ್ಚೊತ್ತಿ ಮೆಚ್ಚುಗೆಯ ಮಳೆಗರೆದಿದೆ.

ಅಂದ ಹಾಗೆ ಭಾನು ಪಾತ್ರಧಾರಿ ನಟಿ ಸಂಧ್ಯಾ ಅರಕೆರೆ ಕೂಡ ಈ ಪಾತ್ರ ನಿರ್ವಹಣೆಯಿಂದ ಅಷ್ಟೇ ಖುಷಿಯಾಗಿದ್ದಾರೆ. ಸಿನಿಮಾಗೆ ಹಾಗೂ ತಮ್ಮ ಪಾತ್ರಕ್ಕೆ ನಿರೀಕ್ಷೆಗೂ ಮೀರಿ ಉತ್ತಮ ಪ್ರತಿಕ್ರಿಯೆ ಸಿಕ್ಕಿರುವುದು ಅವರಲ್ಲಿ ಭರವಸೆಯನ್ನೂ ಮೂಡಿಸಿದೆ.

‘ಒಳ್ಳೆಯ ಕಥೆಯನ್ನು ಖಂಡಿತ ಜನರು ಸ್ವೀಕರಿಸುತ್ತಾರೆ ಎಂಬುದಕ್ಕೆ ಈ ಸಿನಿಮಾ ಒಂದು ಉದಾಹರಣೆ. ಈ ಕಥೆಯಲ್ಲಿ ಒಂದು ಇನೊಸೆನ್ಸ್ ಇದೆ. ಈ ಸಿನಿಮಾವನ್ನು ಜನ ಸ್ವೀಕರಿಸುತ್ತಾರೆ ಎನ್ನುವ ಭರವಸೆ ಇತ್ತು. ಅದು ನಿಜವಾಯಿತು’ ಎಂದು ಸಂತಸದಿಂದ ಹೇಳುತ್ತಾರೆ.

ಸಂಧ್ಯಾ ಅವರು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆಯವರು. ಪಿಯುಸಿವರೆಗೂ ಊರಿನಲ್ಲೇ ವಿದ್ಯಾಭ್ಯಾಸ ಮಾಡಿದ್ದ ಅವರು ಪದವಿಗಾಗಿ ಮೈಸೂರು ಸೇರಿದರು. ಆ ಸಮಯದಲ್ಲೇ ನೀನಾಸಂನ ನಾಟಕವೊಂದನ್ನು ನೋಡಿದ ಅವರಲ್ಲಿ ನಟನೆಯೆಡೆಗೆ ಹುಟ್ಟಿದ ಆಸಕ್ತಿ, ರಂಗಭೂಮಿಯ ಪರಿಚಯ ಮಾಡಿಕೊಟ್ಟಿತ್ತು.

ಒಂದು ವರ್ಷ ತರಬೇತಿ ಪಡೆದ ಅವರಿಗೆ ನಟನೆಯೊಂದಿಗೆ ಜೀವನದ ಅನುಭವಗಳನ್ನೂ ಕೊಟ್ಟಿದ್ದು ನೀನಾಸಂನ ತಿರುಗಾಟ. ನಾಲ್ಕು ತಿಂಗಳುಗಳ ಕಾಲ ಬೇರೆ ಬೇರೆ ಜಿಲ್ಲೆಗಳಲ್ಲಿ ನಾಟಕ ಪ್ರದರ್ಶನ ಮಾಡಿದ್ದು ಹೊಸ ಹೊಸ ಕಲಿಕೆಗಳನ್ನು ದಾಖಲಿಸುತ್ತಾ ಹೋಯಿತು. ಆನಂತರ ‘ಜನಮನದಾಟ’ ರೆಪರ್ಟರಿಯಲ್ಲಿ ಒಂದೆರಡು ವರ್ಷ ತೊಡಗಿಕೊಂಡಿದ್ದು, ಅನುಭವಗಳ ಮೊತ್ತವನ್ನು ಹಿಗ್ಗಿಸಿತ್ತು. ರಂಗಭೂಮಿ ಎಂದರೇನೆಂದು ತಿಳಿದಿಲ್ಲದ, ತೀರಾ ಹಿಂದುಳಿದ ಹಳ್ಳಿ ಪ್ರದೇಶಗಳಿಗೆ ಹೋಗಿ ನಾಟಕ ಪ್ರದರ್ಶನ ಮಾಡುತ್ತಿದ್ದುದು ಸಂಧ್ಯಾ ಅವರ ಕಲಾ ಬದುಕಿಗೆ ಉತ್ತಮ ಮುನ್ನುಡಿಯೂ ಆಗಿತ್ತು. ಇವೆಲ್ಲವೂ ಅವರ ಕಲಾ ಹಾದಿಯನ್ನು ರೂಪಿಸಲು ಪ್ರೇರಣೆಯಾಗಿ ಒದಗಿಬಂದವು.

ಅಮ್ಮನ ಒತ್ತಾಸೆಯಂತೆ ಓದು ಮುಗಿಸಲು ಸ್ನಾತಕೋತ್ತರ ಪದವಿಗೆಂದು ಬೆಂಗಳೂರಿಗೆ ಕಾಲಿಟ್ಟ ಸಂಧ್ಯಾ ಅವರು ಓದಿಗೆ ಆರಿಸಿಕೊಂಡಿದ್ದು ಕೂಡ ರಂಗಭೂಮಿಯ ವಿಷಯವೇ. ಓದುತ್ತಲೇ ಬೆಂಗಳೂರನ್ನು ಬೆರಗಿನಿಂದ ನೋಡುತ್ತಿದ್ದ ಅವರಲ್ಲಿ ಇಲ್ಲಿನ ರಂಗಪ್ರೀತಿ, ರಂಗಸಂಸ್ಕೃತಿ ಮತ್ತಷ್ಟು ಸೆಳೆದಿತ್ತು. ಸಮಯ ಆದಾಗಲೆಲ್ಲಾ ನಾಟಕಗಳನ್ನು ನೋಡುತ್ತಿದ್ದ, ನಾಟಕಗಳ ಸಾಂಗತ್ಯ ಬೆಳೆಸಿಕೊಂಡಿದ್ದ ಅವರಿಗೆ ಆ ಸಮಯದಲ್ಲಿಯೇ ‘ಸುಳಿ’ ಸಿನಿಮಾ ಅವಕಾಶ ಅರಸಿ ಬಂದಿತ್ತು.

‘ನನಗೆ ಸಿನಿಮಾ ಬಗೆಗಿನ ಗಂಧಗಾಳಿ ಗೊತ್ತಿರಲಿಲ್ಲ. ಧಾರಾವಾಹಿ, ಸಿನಿಮಾಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಯಾವ ಆಲೋಚನೆಯೂ ಇರಲಿಲ್ಲ. ಸಿನಿಮಾಗಳನ್ನು ನೋಡುತ್ತಿದ್ದೆ ಅಷ್ಟೆ. ಹೀಗಿದ್ದ ಸಮಯದಲ್ಲಿಯೇ, ಹಿರಿಯ ನಿರ್ದೇಶಕ ಪಿ.ಎಚ್. ವಿಶ್ವನಾಥ್ ಅವರ ‘ಸುಳಿ’ ಎಂಬ ಕಲಾಪ್ರಧಾನ ಸಿನಿಮಾದಲ್ಲಿ ಅವಕಾಶ ದೊರಕಿತು. ಸಿನಿಮಾದ ಮೊದಲ ಅನುಭವ ನೀಡಿದ್ದು ಈ ಚಿತ್ರವೇ. ಅಲ್ಲಿಂದ ಶುರುವಾಯಿತು ಸಿನಿಮಾರಂಗದ ಒಡನಾಟ. ಆ ಸಿನಿಮಾದಿಂದ ಇನ್ನೊಂದು ಸಿನಿಮಾ, ಮತ್ತೊಂದು ಸಿನಿಮಾ, ಹೀಗೆ ಒಂದರಿಂದ ಒಂದು ಅವಕಾಶಗಳು ಸಿಗುತ್ತಿದ್ದವು. ಒಳ್ಳೊಳ್ಳೆಯ ಸಿನಿಮಾಗಳು, ಉತ್ತಮ ನಿರ್ದೇಶಕರ ಜೊತೆ ಕೆಲಸ ಮಾಡುವ ಅವಕಾಶಗಳು ನನ್ನದಾಯಿತು’ ಎಂದು ಸ್ಮರಿಸಿಕೊಳ್ಳುತ್ತಾರೆ ಅವರು.

ತನುಜಾ, ಬೈ ಟು ಲವ್, ಟೋಬಿ, ಪೆಪೆ, ಕಂಬ್ಳಿಹುಳ, ಸ್ವಾತಿಮುತ್ತಿನ ಮಳೆ ಹನಿಯೇ, ಫೋಟೊ ಹೀಗೆ ಹಲವು ಸಿನಿಮಾಗಳಲ್ಲಿ ನಟಿಸುವ ಅವಕಾಶಗಳು ದೊರೆತವು.

ಆ ಅವಕಾಶಗಳೆಲ್ಲವೂ ತಮ್ಮನ್ನು ತಿದ್ದಿ ತೀಡಿದ ಬಗೆಯನ್ನು ವಿವರಿಸುವ ಅವರು, ‘ಒಂದೊಂದು ನಿರ್ದೇಶಕರದ್ದು ಒಂದೊಂದು ಪ್ಯಾಟರ್ನ್. ಹೊಸದಕ್ಕೆ ಹೊಂದಿಕೊಳ್ಳಬೇಕು. ಹಳೆಯದನ್ನು ಮರೆತು ಝೀರೊ ಆಗಿ ಹೊಸತನ್ನು ಕಲಿಯಬೇಕು. ಇದೇ ಪಾತ್ರವೊಂದನ್ನು ಅನುಭವಿಸುವ ಪರಿ’ ಎನ್ನುವ ಅವರು, ‘ಪಾತ್ರ ಚಿಕ್ಕದಿರಲಿ, ದೊಡ್ಡದಿರಲಿ, ಅಚ್ಚುಕಟ್ಟಾಗಿ ನಿರ್ವಹಿಸುವುದಷ್ಟೇ ತಮ್ಮ ಕೆಲಸ’ ಎನ್ನುತ್ತಾರೆ.

‘ಪಾತ್ರ ಚೆನ್ನಾಗಿದೆ ಎಂದು ಆ ಕ್ಷಣಕ್ಕೆ ಅನ್ನಿಸಿದರೆ ಮಾಡುತ್ತೇನೆ. ಒಳ್ಳೆಯ ತಂಡಗಳಲ್ಲಿ ಕೆಲಸ ಮಾಡಬೇಕು, ಕಲಿಯುತ್ತಲೇ ಇರಬೇಕು ಅಷ್ಟೆ’ ಎನ್ನುವ ಸಂಧ್ಯಾ ಅವರ ಮುಂದೆ ಹೊಸ ಸಿನಿಮಾಗಳ ಅವಕಾಶಗಳು ಸೇರಿಕೊಳ್ಳುತ್ತಿವೆ. ■

